148th, ಕ್ರ.ಸಂ. 15

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ. ಎಸ್. ಅರುಣ್ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸಾರ್ವಜನಿಕ ಮಹತ್ವದ ವಿಷಯಕ್ಕೆ ಉತ್ತರ.

ಪ್ರಶ್ನೆ:

I

ಸ್ಮಾರ್ಟ್ ಆಗದ ಖಾಕಿ ಆರೋಗ್ಯ ಭಾಗ್ಯ ಯೋಜನೆಯಡಿ ಚಿಕಿತ್ಸೆ ಪಡೆಯಲು ದೃಢೀಕರಣ ಪತ್ರ ಕೊಡುವ ಸಂಕಷ್ಟ ಸ್ಮಾರ್ಟ್ ಕಾರ್ಡ್‌ಗೆ ಒತ್ತಾಯ" ಎಂಬ ಶೀರ್ಷಿಕೆಯಡಿ ದಿನಾಂಕ: 20 ನೇ ಡಿಸೆಂಬರ್ 2022 ರ ವಿಜಯವಾಣಿ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಹಗಲಿರುಳು ಶ್ರಮಿಸುವ ಪೊಲೀಸರು ಹಾಗೂ ಅವರ ಅವಲಂಬಿತರ ಆರೋಗ್ಯ ಹಿತದೃಷ್ಟಿಯಿಂದ 'ಆರೋಗ್ಯ ಭಾಗ್ಯ' ಯೋಜನೆಯಡಿ ಚಿಕಿತ್ಸೆ ಪಡೆಯಲು ಹೆಲ್ತ್ ಸ್ಮಾರ್ಟ್ ಕಾರ್ಡ್ ಇಲ್ಲದೇ ಪ್ರತಿ ಬಾರಿ ಚಿಕಿತ್ಸೆ ಪಡೆಯಲು ಮೇಲಾಧಿಕಾರಿಗಳ ಕಛೇರಿಗಳಿಗೆ ಅಲೆದು ದೃಢೀಕರಣ ಪಡೆದು ಆಸ್ಪತ್ರೆಗೆ ಒದಗಿಸಬೇಕಾದ ಪರಿಸ್ಥಿತಿಯನ್ನು ರಾಜ್ಯದ ಪೊಲೀಸರು ಎದುರಿಸುತ್ತಿರುವುದು ತಿಳಿದುಬಂದಿರುತ್ತದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಡಿಜಿಟಲೀಕರಣಕ್ಕೆ ಒತ್ತು ಕೊಟ್ಟು ಎಲ್ಲಾ ಯೋಜನೆಗಳನ್ನು ಡಿಜಿಟಲೀಕರಣಗೊಳಿಸಿದೆ. ಆದರೆ ಹಲವು ವರ್ಷಗಳಿಂದ ಜಾರಿಯಲ್ಲಿರುವ ಪೊಲೀಸ್ ಆರೋಗ್ಯ ಭಾಗ್ಯ ಯೋಜನೆಯಡಿ ಹೆಲ್ತ್‌ಸ್ಮಾರ್ಟ್ ಕಾರ್ಡ್ ಕೊಡುವ ವ್ಯವಸ್ಥೆ ಇನ್ನು ಸ್ಮಾರ್ಟ್ ಆಗದಿರುವುದು ವಿಪರ್ಯಾಸವೇ ಸರಿ.

ಈಗಾಗಲೇ ಹೇಳಿದಂತೆ ಪೊಲೀಸರು ಮತ್ತು ಅವರ ಅವಲಂಬಿತರು ಚಿಕಿತ್ಸೆ ಸಲುವಾಗಿ ಮೇಲಾಧಿಕಾರಿಗಳ ಕಛೇರಿಗಳಿಗೆ ಅಲೆದಾಡುವುದು ನಿರಂತರವಾಗಿ ಮುಂದುವರೆದಿದ್ದು, ಇದರಿಂದ ಸಮಯ ಮತ್ತು ಹಣದ ಅಪವ್ಯಯವಾಗುತ್ತಿದೆ.

ಆಯುಷ್ಮಾನ್ ಕಾರ್ಡ್‌ನಂತೆ ಆರೋಗ್ಯ ಭಾಗ್ಯ ಯೋಜನೆಗೂ ಆಧಾರ್ ಕಾರ್ಡ್ ಲಿಂಕ್ ಮಾಡಿದರೆ ರೋಗಿಯ ವೈದ್ಯಕೀಯ ದಾಖಲೆಗಳು ಸಹ ಕಾರ್ಡ್‌ನಲ್ಲೇ ಲಭ್ಯವಾಗಲಿದೆ, ಇದರಿಂದ ಚಿಕಿತ್ಸೆಗೂ ಅನುಕೂಲವಾಗಲಿದೆ. ಅಲ್ಲದೇ ಭೌತಿಕ ದಾಖಲಾತಿಗಳನ್ನು ಒದಗಿಸಲು ಮೇಲಾಧಿಕಾರಿಗಳ ಕಛೇರಿಗಳಿಗೆ ಅಲೆದಾಡುವ ಅವಶ್ಯಕತೆಯೂ ಇಲ್ಲಲಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಸಾರ್ವಜನಿಕರ ರಕ್ಷಣೆ ಹೊಣೆ ಹೊತ್ತಿರುವ ಪೊಲೀಸರಿಗೆ ಹಾಗೂ ಅವಲಂಬಿತರ ಆರೋಗ್ಯದ ಸಲುವಾಗಿ ಹೆಲ್ತ್ ಸ್ಮಾರ್ಟ್ ಕಾರ್ಡ್‌ಗಳನ್ನು ಕೂಡಲೇ ವಿತರಿಸಲು ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

II

ಉತ್ತರ:

ಪೊಲೀಸ್ ಇಲಾಖೆಯಲ್ಲಿ ಆರೋಗ್ಯ ಭಾಗ್ಯ ಯೋಜನೆಯಡಿ ಪೊಲೀಸ್ ಅಧಿಕಾರಿ/ ಸಿಬ್ಬಂದಿ ಅವರ ಪತಿ/ಪತ್ನಿ ಅವಲಂಬಿತ ಮಕ್ಕಳು ಹಾಗೂ ತಂದೆ-ತಾಯಿಯವರಿಗೆ ಚಿಕಿತ್ಸೆಗೆ ಅನುಕೂಲವನ್ನು ಒದಗಿಸಿದ್ದು, ಈ ಬಗ್ಗೆ ಈಗಾಗಲೇ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು, ಪ್ರಸ್ತುತ ಈ ತಂತ್ರಾಂಶ ಚಾಲನೆಯಲ್ಲಿರುತ್ತದೆ. ಪೊಲೀಸ್ ಅಧಿಕಾರಿ/ಸಿಬ್ಬಂದಿ ರವರು ಒಂದು ಬಾರಿ ಈ ತಂತ್ರಾಂಶದಡಿ ದಾಖಲಾತಿಗಳೊಂದಿಗೆ ಕುಟುಂಬದ ವಿವರಗಳನ್ನು ಸಲ್ಲಿಸಿದಲ್ಲಿ/ನೋಂದಾಯಿಸಿದಲ್ಲಿ ಮುಂದೆ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾದ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿ/ಸಿಬ್ಬಂದಿ ರವರುಗಳು ಕೆ.ಜಿ.ಐ.ಡಿ ನಂಬರ್ ಅನ್ನು ಆಸ್ಪತ್ರೆಗೆ ನೀಡಿದಲ್ಲಿ ತಂತ್ರಾಂಶದ ಮೂಲಕವೇ ಅರ್ಜಿದಾರರು ದೃಢೀಕರಣ ಪತ್ರವನ್ನು ಪಡೆಯುವ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಮೇಲಾಧಿಕಾರಿಗಳ ಕಛೇರಿಗೆ ಅಲೆದು ದೃಢೀಕರಣ ಪತ್ರ ಪಡೆಯುವ ಪ್ರಶ್ನೆಯೇ ಎದುರಾಗುವುದಿಲ್ಲ. ಪೊಲೀಸ್ ಅಧಿಕಾರಿ/ಸಿಬ್ಬಂದಿ ರವರುಗಳು ಕೆ.ಜಿ.ಐ.ಡಿ ನಂಬರ್ ಮುಖಾಂತರವೇ ತಂತ್ರಾಂಶದ ಬಳಕೆ ಆಗುವುದರಿಂದ, ಆಯುಷ್ಮಾನ್ ಕಾರ್ಡ್‌ನಂತೆ ಆರೋಗ್ಯ ಭಾಗ್ಯ ಯೋಜನೆಗೆ ಆಧಾರ ಲಿಂಕ್ ಮಾಡುವ ಅವಶ್ಯಕತೆ ಇರುವುದಿಲ್ಲ.

**HD/154/PHS/2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು